## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 744 |
| ಮಾನ್ಯ ಸದಸ್ಯರ ಹೆಸರು | ಡಾ. ಡಿ ತಿಮ್ಮಯ್ಯ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 19.09.2022 |

| | ಪ್ರಶ್ನೆ | ಉತ್ತರ |
|---|---|---|
| (ಅ) | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಬೋಧಕ ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು; | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ. | ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಖಾಲಿಯಿರುವ ಹುದ್ದೆಗಳು |
|---|---|---|---|---|
| | **ಬೋಧಕರು** | | | |
| 1 | ಪ್ರಾಧ್ಯಾಪಕ | 81 | 06 | 75 |
| 2 | ಸಹ ಪ್ರಾಧ್ಯಾಪಕ | 124 | 30 | 94 |
| 3 | ಸಹಾಯಕ ಪ್ರಾಧ್ಯಾಪಕ (ಪಿಜಿ) | 250 | 125 | 125 |
| 4 | ಸಹಾಯಕ ಪ್ರಾಧ್ಯಾಪಕ (ಯುಜಿ) | 211 | 103 | 108 |
| | ಒಟ್ಟು | 666 | 264 | 402 |
| | **ಬೋಧಕೇತರರು** | | | |
| 1 | ಉಪ ಕುಲಸಚಿವ | 08 | 06 | 02 |
| 2 | ಸಹಾಯಕ ಕುಲಸಚಿವ | 10 | 10 | - |
| 3 | ಅಧೀಕ್ಷಕ | 44 | 42 | 02 |
| 4 | ಹಿರಿಯ ಸಹಾಯಕ | 29 | 29 | - |
| 5 | ಪ್ರಥಮ ದರ್ಜೆ ಸಹಾಯಕ | 83 | 78 | 05 |
| 6 | ಶೀಘ್ರಲಿಪಿಗಾರ | 32 | 03 | 29 |
| 7 | ಎರಡನೇ ದರ್ಜೆ ಸಹಾಯಕ | 165 | 72 | 93 |
| 8 | ಬೆರಳಚ್ಚುಗಾರ ಹಾಗೂ ಗುಮಾಸ್ತರು | 90 | 07 | 83 |
| 9 | ತಾಂತ್ರಿಕ ವರ್ಗ | 390 | 97 | 293 |
| 10 | ಪರಿಚಾರಕರು | 125 | 68 | 57 |
| 11 | ಸೇವಕ, ಕಾವಲುಗಾರ, ತೋಟಗಾರ, ಸ್ವೀಪರ್ ಇತ್ಯಾದಿ | 373 | 102 | 271 |
| | ಒಟ್ಟು | 1349 | 514 | 835 |

| | ಪ್ರಶ್ನೆ | ಉತ್ತರ |
|---|---|---|
| (ಆ) | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವುದೇ ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ. |

| | | |
|---|---|---|
| (ಇ) | ನೇಮಕಾತಿ ಪ್ರಕ್ರಿಯೆ ನಿಯಮದಂತೆ ನೇಮಕಾತಿ ಸಮಿತಿಯ ಮೂಲಕ ಹುದ್ದೆಗಳು ಭರ್ತಿಯಾಗಿವೆಯೇ; ಆಗದಿದ್ದಲ್ಲಿ, ನೇಮಕಾತಿಗೆ ಅನುಸರಿಸಿದ ನಿಯಮಗಳೇನು? | ವಿಶ್ವವಿದ್ಯಾಲಯಗಳಲ್ಲಿ ಖಾಲಿಯಿರುವ ಬೋಧಕರ ನೇರ ನೇಮಕಾತಿ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಭರ್ತಿ ಮಾಡಲು ಮಾದರಿ ಪರಿನಿಯಮವನ್ನು ಸರ್ಕಾರದ ಹಂತದಲ್ಲಿ ಸಿದ್ಧಪಡಿಸಿದ್ದು, ಅದರನ್ವಯ ಎಲ್ಲಾ ವಿಶ್ವವಿದ್ಯಾಲಯಗಳು ಯುಜಿಸಿ ಮಾರ್ಗಸೂಚಿಗಳನ್ವಯ ಪರಿನಿಯಮವನ್ನು ರಚಿಸಿಕೊಂಡು ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದ ನಂತರ ನೇಮಕಾತಿ ಪ್ರಕ್ರಿಯೆಗೆ ವಿಶ್ವವಿದ್ಯಾಲಯಗಳು ಕ್ರಮವಹಿಸುತ್ತವೆ. ಅದರಂತೆ ಮೈಸೂರು ವಿಶ್ವವಿದ್ಯಾಲಯವು ಸಹ ಪರಿನಿಯಮವನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದು, ಪರಿಶೀಲನೆಯ ಹಂತದಲ್ಲಿರುತ್ತದೆ.<br><br>ಮೈಸೂರು ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ರ ಪ್ರಕರಣ 57 ರಡಿ ನೇಮಕಾತಿ ಆಯ್ಕೆ ಮಂಡಳಿಯನ್ನು ರಚಿಸಿಕೊಂಡು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡುತ್ತದೆ.<br><br>ಪ್ರಸ್ತುತ ಕಳೆದ 03 ವರ್ಷಗಳಿಂದ ಯಾವುದೇ ನೇರ ನೇಮಕಾತಿಯನ್ನು ವಿಶ್ವವಿದ್ಯಾಲಯವು ಕೈಗೊಂಡಿರುವುದಿಲ್ಲ. |

ಸಂಖ್ಯೆ: ಇಡಿ 66 ಯುಎಂವಿ 2022

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು